ಹರಸುತ್ತಲೇ.

ಮೈತ್ರಿ ಹೆಸರಿಗೆ ತಕ್ಕಂತೆ ಸ್ನೇಹಶೀಲೆ. ಎಲ್ಲರಿಗೂ ಧಾರಾಳವಾಗಿ ಸ್ನೇಹಮಧು ಹಂಚುವಾಕೆ. ಒಳಗೊಂದು ವಿಭಿನ್ನ ಸ್ವಭಾವ. ಹಸಿಮಣ್ಣಿನೊಳಗೆ ಹುದುಗಿದ್ದ ಬೀಜವು ಒಳಗೇ ಅಂಕುರಾರ್ಪಣೆ ಮಾಡುತ್ತ ಮೆಲುವಾಗಿ ಮಣ್ಣ ಪದರ ಸರಿಸುತ್ತ ಹೊರ ಜಗತ್ತಿಗೆ ಹೆಡೆ ಎತ್ತುವಂತೆ ಮೈತ್ರಿಯ ಈ ಅಂತರ್ಗತ ಗುಣವು ತನಗೆ ಬೇಕೆಂದಾಗ ಪ್ರಕಟಗೊಳ್ಳುತ್ತಿತ್ತು. ಅದೇನೆಂದರೆ ಯಾರಾದರೂ ಹೊಸಬರ ಪರಿಚಯವಾಗಿ ಮತ್ತೆ ಮತ್ತೆ ಸಂಪರ್ಕದಲ್ಲಿದ್ದರೆ, ಅವರ ಸ್ಥಿತಿಗತಿ, ಗುಣ ದೋಷಾದಿಗಳನ್ನು ತನ್ನಲ್ಲೇ ಕಲ್ಪಿಸಿಕೊಳ್ಳುವುದು!

ಟ್ರಾವೆಲ್ಸ್‌ನಲ್ಲಿ ಉದ್ಯೋಗಿಯಾಗಿದ್ದಾಗ ಅವಳ ಈ ಸ್ವಭಾವಕ್ಕೆ ಚಿದಾನಂದನ ಸರದಿ ಬಂದಿತ್ತು! ಹೆತ್ತವರ ಒಂಟಿ ಸಂತಾನ ಮೈತ್ರಿ, ಅದಕ್ಕೆಂದೇ ಇರಬೇಕು. ಕಿರಿಯ ಚೂಟಿ ಚಿದಾನಂದನಲ್ಲಿ ಸೋದರ ವಾತ್ಸಲ್ಯದ ಸೆಳೆತ. ನೆತ್ತರಿನ ನಂಟಲ್ಲ, ಭಾವ ಸಂಬಂಧದ ಅಂಟು ಅದಕ್ಕಿತ್ತು. ಅವನಿಗೂ ಅಷ್ಟೇ. ಮೈತ್ರಿ ಅಕ್ಕನೆಂದರೆ ಸಲಿಗೆ, ಆತ್ಮೀಯತೆ. ಮೈತ್ರಿಗೆ ಚಿದಾನಂದನಲ್ಲಿ ಏನೋ ಒಳ ನೋವಿನ ಪೀಡೆ ಇದೆ ಎಂಬ ಅನಿಸಿಕೆ. ಅದರ ನಿವಾರಣೆಯ ಜವಾಬ್ದಾರಿ ತನ್ನದೆಂಬ ಆಪ್ತತೆಯೂ ಮೊಳೆತಿತ್ತು. ಅದಾಗಲೇ, ಅದನ್ನು ಪೂರ್ಣ ನೇರ ಅರಿತುಕೊಂಡು ಪರಿಹಾರ, ಸಾಂತ್ವನದ ತಂಪೆರೆಯ ಬೇಕು ಅನ್ನುವಷ್ಟರಲ್ಲಿ ಉದ್ಯೋಗದ ಬದಲಿಸಿದ್ದಾಗಿತ್ತು ಅವಳು. ಆಮೇಲೆ ಇಬ್ಬರಿಗೂ ಅವರವರದೇ ಬದುಕಿನ ಪರಿಧಿಯೊಳಗಿನ ಸುತ್ತಾಟ, ಹೋರಾಟ ಎಲ್ಲ.. ಎಲ್ಲರ ಆಪ್ತ ಭಾವನೆಗಳನ್ನೂ ಆದಷ್ಟೂ ಮೊಟಕಿ ಬಿಡುವ ಧಾವಂತದ ಬದುಕು, ಇತ್ತೀಚಿನದಲ್ಲವೆ?

* ***

ಚಿದಾನಂದನಿಗೆ ಪ್ರವಾಸದ ದಿನಗಳಲ್ಲಿ ಸಾಮಾನ್ಯವಾಗಿ ಬಸ್ಸಿಡೀ ಅಪರಿಚಿತರೇ. ಎಂದಾದರೂ ಪರಿಚಿತ ಮುಖಗಳು ಕಂಡಲ್ಲಿ ಜಗ್ಗನೇ ಬೆಳಗಿದ ಪ್ರಖರ ದೀಪ ಆತ, ಒಳಗು ಉಲ್ಲಾಸದ ಲಹರಿ.

ಅಂದು ಎಂಟು ದಿನಗಳ ದಕ್ಷಿಣ ಭಾರತ ಪ್ರವಾಸದ ಪ್ರಾರಂಭ ದಿನ. ಬಸ್ಸಿನಲ್ಲಿ ಮೈತ್ರಿ, ಮಧು ಇಬ್ಬರನ್ನೂ ಕಂಡಾಕ್ಷಣ ಹಿಗ್ಗಿನ ಬುಗ್ಗೆಯಾಗಿದ್ದ ಚಿದಾನಂದ. ಸುಮಾರು ನಾಲ್ಕೈದು ವರ್ಷಗಳ ಬಳಿಕ ಸುದೀರ್ಘ, ನೇರ ಮುಖಾಮುಖಿ... ಅವರಿಬ್ಬರ ಮರು ಭೇಟಿ ಹೊಸ ಅಧ್ಯಾಯಕ್ಕಾಗಿ ಕಾದಿತ್ತೇನೋ?.

‘ಓ... ಮೈತ್ರಿ ಅಕ್ಕ, ಮಧು.... ವಾಟ್ ಎ ಪ್ಲೆಸೆಂಟ್ ಸರ್‌ಪ್ರೈಸ್!...’

‘ಹಾಯ್ ಚಿದು.... ಹೇಗಿದ್ದೀ? ಈ ಟ್ರಾವೆಲ್ಸ್ ಅಂದಾಗ ನಿನ್ನನ್ನು ಎಕ್ಸ್‌ಪೆಕ್ಟ್ ಮಾಡಿದ್ದೆ... ನೀನು ಸಿಕ್ಕಿದ್ದು ಒಳ್ಳೇದಾಯ್ತು... ಮತ್ತೇನು ವಿಶೇಷ?....’

ಪರಿಚಯದ ಮಂದಹಾಸ ಬೀರಿದ ಮೈತ್ರಿಗೆ ಚಿದಾನಂದನೂ ತುಟಿ ಅರಳಿಸಿದ.

‘ನಾನು ಸೂಪರ್ ಆಗಿದ್ದೇನೆ... ನಿಮ್ಮನ್ನು ನೋಡಿ ನನ್ಗೂ ಖುಷಿಯೇ.... ಭಾವ ಬರ್ಲಿಲ್ವಾ? ಓ.. ಮಧು ಈಗ ಪುಟ್ಟ ಹುಡುಗಿ ಅಲ್ವಾ?.

‘ಭಾವ ಫಾರಿನ್‌ನಲ್ಲಿದ್ದಾರೆ.. ಅದ್ಕೇ ನಾವು ಟೂರಿಗೆ ಬಂದ್ದದ್ದು...’

ಪಕ್ಕದಲ್ಲಿ ಮುಖ ಅರಳಿಸಿಕೊಂಡೇ ನಿಂತಿದ್ದ ಮಧುವಿನ ಬೆನ್ನು ತಟ್ಟುತ್ತಾ ಅಂದ ಚಿದಾನಂದ ‘.... ಆಮೇಲೆ ಸಿಕ್ತೇನೆ ಆಯ್ತಾ? ಟೂರ್ ಇಡೀ ಒಟ್ಟಿಗೆ ಇರ್ತೇವಲ್ವಾ?’

ಮಾತು ಮೊಟಕುಗೊಳಿಸಿ ಮುಂದೆ ಸಾಗಿದ ಆತ. ‘ಓಹ್.... ಅದೇ ವರ್ಕೊಹಾಲಿಕ್ ಚಿದಾನಂದ...’ ಅಂದುಕೊಂಡಳು ಮೈತ್ರಿ.

ವಿಶಾಲವಾದ ಡಿಲಕ್ಸ್ ಬಸ್ಸು, ಒಳ ಹೊರಗೆ ಚೆಲುವನ್ನೇ ಹೊದ್ದುಕೊಂಡಿತ್ತು. ಭವ್ಯ ಮಹಲೊಂದರ ಚೆಲುವಾದ ಡ್ರಾಯಿಂಗ್ ರೂಮಿನಂತೆ ನೆಲವಿಡೀ ಚಾಚಿಕೊಂಡಿದ್ದ ಕೆಂಬಣ್ಣದ ರತ್ನಗಂಬಳಿ ಹಿತ ಸ್ಪರ್ಶಾನುಭವಕ್ಕೆ ಆಹ್ವಾನ ನೀಡುತ್ತಿತ್ತು. ಚಾಲಕನ ಹಿಂಭಾಗದ ಗೋಡೆಗೆ ಆಕರ್ಷಕ ಪೈಟಿಂಗ್ ಒಂದನ್ನು ಎಲ್ಲರಿಗೂ ಕಾಣುವಂತೆ ತೂಗಾಡಿಸಲಾಗಿತ್ತು. ಮುಸ್ಸಂಜೆಯ ಸೂರ್ಯಾಸ್ತದ ಪ್ರಕೃತಿ ಸುರಮ್ಯ ಬದಲಾವಣೆಗಳನ್ನು ಸೆರೆ ಹಿಡಿದ ಚಿತ್ರವದು.

ಆಗಸದಲ್ಲಿನ ನಸು ಕೆಂಬಣ್ಣ, ಅಲ್ಲಲ್ಲಿ ದಟ್ಟ ಕಂಬಣ್ಣದ ಮೇಘರಾಶಿ, ಬೀಸುಗಾಳಿಗೆ ಚಾಮರವಾದ ಗಿಡಮರಗಳ ಗೆಲ್ಲುಗಳು, ಎಲೆಗಳಿಂದ ಭೂದೇವಿಗೆ ಅಭಿಷೇಕ ಮಾಡುತ್ತಿರುವ ಮಳೆ ಹನಿಗಳು, ಎತ್ತಲೋ ಓಡುತ್ತಿರುವ ಎರಡು ನಾಯಿಮರಿಗಳು, ಮನೆಯೊಂದರ ಕಿರು ಕಿಟಕಿಯಿಂದ ಹೊರಗೆ ಇಣುಕುತ್ತಿರುವ ಚಿಣ್ಣರಿಬ್ಬರ ತುಂಟ ನಗೆ ಭಂಗಿ,... ಎಲ್ಲ ನೇರ ಕಣ್ಣಿಗೆ ಕಟ್ಟುವಂತಹ ದೃಶ್ಯಾವಳಿ, ಚಿತ್ರಪಟದ ಕೆಳಭಾಗದಲ್ಲಿ ‘ಪ್ರಕೃತಿ ಆರಾಧನೆಯೇ ಪರಮನ ಆರಾಧನೆ–ಕುವೆಂಪು’ ಎಂದು ರಾರಾಜಿಸುವ ಕಸ್ತೂರಿ ಕನ್ನಡದ ವಾಕ್ಯವೊಂದು– ಯಾವುದರಿಂದ ನೆಟ್ಟ ಕಣ್ಣೋಟ ಕೀಳಬೇಕು ಎಂಬ ಸಂದಿಗ್ಧತೆಯ ಮೋಡಿಗಾರನಾಗಿತ್ತು ಆ ಚಿತ್ರಪಟ!

ಮಕ್ಕಳಾದಿಯಾಗಿ ಎಲ್ಲರ ಚಿತ್ತಾಪಹಾರಿಯಾಗಿತ್ತು ಆ ಪೈಂಟಿಂಗ್ಸ್. ‘ವಾವ್’ ಎನ್ನುತ್ತ ಮೈತ್ರಿ ಖುಷಿಯಿಂದ ಮಾಲಿಕರ ಸದಭಿರುಚಿ, ಕನ್ನಡಾಭಿಮಾನಗಳಿಗೆ ತಲೆದೂಗಿದಳು. ಕನ್ನಡೇತರರಾದ ಡೆಲ್ಲಿಯ ಅಜಿತ್, ಮುಂಬೈಯ ಸುಶಾಂತ್ ಮತ್ತವನ ಪತ್ನಿ ಶೀತಲ್ ಸಹಾ ಅದರ ಅರ್ಥ ಕೇಳಿಕೊಂಡು ಸೈಗುಟ್ಟಿದ್ದರು. ಆದರೆ... ಸ್ವಲ್ಪ ಹೊತ್ತಿನಲ್ಲಿ ಡ್ರೈವರ್ ರಾಜು ಕ್ಲೀನರ್ ಸಿದ್ಧಣ್ಣನವರ ಮಾತುಗಳಿಂದ ಮೈತ್ರಿಗೆ ಅರಿವಾಗಿತ್ತು ಆ ಚಿತ್ರದ ಕಲಾವಿದ ಚಿದಾನಂದ ಎಂದು! ಆ ಪ್ರಿಯ ವಾಸ್ತವ ಮೂಕಗೊಳಿಸಿತು ಅವಳನ್ನು. ಆ ಸಂಭ್ರಮಕ್ಕೆ ಅವನಿಂದಲೇ ಸ್ಪಷ್ಟೀಕರಣ ಬೇಕೆನಿಸಿತು.

‘ಚಿದಾ... ಬಾ ಇಲ್ಲಿ....’ ಬೀಸು ಕೈ ಕರೆ ನೀಡಿತು.

ಬಾಗಿಲ ಬಳಿ ನಿಂತಿದ್ದಾತ ಸೀಟುಗಳನ್ನು ಹಾದು ಬಳಿ ಬಂದ.

‘ಏನಕ್ಕಾ?...’

‘ಆ ಪೈಂಟಿಂಗ್ಸ್ ನಿನ್ನದಂತೆ... ಹೌದಾ? ಎಕ್ಸಲೆಂಟ್.’

‘ಥ್ಯಾಂಕ್ಸ್... ಆದ್ರೆ ಹಳೆಯದು...’

‘ಕಂಗ್ರ್ಯಾಟ್ಸ್... ಇನ್ನೇನಿದೆ ಹೊಸಾ ಪೈಂಟಿಂಗ್ಸ್?...’

‘ಈಗ ಏನಿಲ್ಲ ಅಕ್ಕ... ಅದೆಲ್ಲ ಗತವೈಭವ ಅಷ್ಟೇ...’

‘ಛೆ... ಯಾಕೆ ಹೀಗೆ ನೀನು ಹೇಳುವುದು...?’

ಬಸ್ಸು ಎಲ್ಲೋ ನಿಲುಗಡೆಗೆ ಬಂದಿತ್ತು. ಪೇಲವ ಮುಖದ ಚಿದಾನಂದ ಬಲವಂತದ ನಗೆ ನಕ್ಕ...

‘ನೀನಿನ್ನೂ ಚಿಕ್ಕವನು... ಯಾಕೆ ಹಾಗೆ ಬಾಡಿ ಕೊಂಡಿರುವುದು?’ ತನ್ನ ಮಾತು ಕೇಳಿಸದವನಂತೆ ಮುಂದೆ ಸರಿದವನನ್ನು ನೋಡುತ್ತ ಅವಕ್ಕಾದಳು ಮೈತ್ರಿ.

***

ಟೂರಿಸ್ಟ್ ಬಸ್ಸೆಂಬ ಪುಟ್ಟ ಚಲಿಸುವ ಮನೆಯೊಳಗೆ ಸಮರ್ಥ ಯಜಮಾನನಾಗಿದ್ದ ಚಿದಾನಂದ, ಸದಾ ಸೂತ್ರಧಾರಿಯ ಪಾತ್ರ ವಹಿಸುತ್ತ, ಎಷ್ಟೋ ಬಾರಿ ದೇವಸ್ಥಾನಗಳ ಭೇಟಿಗೋ, ಬಹುದೂರ ಕ್ರಮಿಸಲೇಬೇಕಾದ ತುರ್ತಿಗೋ ಮುಂಜಾವು ನಾಲ್ಕು,



ಚಿತ್ರ – ಸೃಜನ್